**ಓ ಎಸ್ ನಂಃ 361/2019**

**ಪಿ. ಡಬ್ಲ್ಯೂ ಃ 1**

**ದಿಃ 01.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 1 ರವರ ಪರ ಶ್ರೀ ಎಂ ವಿ ಎಸ್ ವಕೀಲರಿಂದ**

ನಾವು ಎಲ್ಲ ಅಣ್ಣ ತಮ್ಮಂದಿರು ಸೇರಿಕೊಂಡು ದಾವೆ ಹಾಕಲು ಮಾಹಿತಿ ಕೊಟ್ಟಿದ್ದೇವೆ. ನಾನು ಪ್ರತಿವಾದಿ 1 ರಿಂದ 5 ರವರ ವಿರುದ್ದ ದಾವೆ ಮಾಡಿದ್ದೇನೆ. ದಾವಾ ಸ್ವತ್ತುಗಳು ನಮ್ಮ ತಂದೆಗೆ ಸೇರಿದ ಸ್ವತ್ತುಗಳು ಅದರಲ್ಲಿ ವಾದಿಗಳಾದ ನಮಗೆ ಮಾತ್ರ ಹಕ್ಕು ಇದೆ ಎಂದು ದಾವೆ ಮಾಡಿದ್ದೇವೆ. ದಾವಾ ಸ್ವತ್ತುಗಳ ಕಂದಾಯ ದಾಖಲೆಗಳು ನಮ್ಮ ತಂದೆಯ ಹೆಸರಿನಿಂದ ನಮ್ಮ ಹೆಸರಿನಲ್ಲಿ ಆಗಿವೆ. ಆ ದಾಖಲೆಗಳನ್ನು ನಾನು ನೋಡಿದ್ದೇನೆ. ನಾನು ಈ ದಾವೆಯನ್ನು ಸ.ನಂ. 170 ರಲ್ಲಿ 2 ಎಕರೆ 18 ಗುಂಟೆ , 119/3 ಬಿ 7 ಗುಂಟೆ ಮತ್ತು ಸ.ನಂ. 119/3 ಇ 16 ಮುಕ್ಕಾಲು ಗುಂಟೆಗಾಗಿ ದಾವೆ ಮಾಡಿದ್ದೇನೆ. ದಾವಾ ಐಟಂ ನಂಬರ್ ನಮ್ಮ ತಂದೆಗೆ ಅವರ ಹಿರಿಯರಿಂದ ಬಂದ ಸ್ವತ್ತು ಇರುತ್ತದೆ. 2 ಮತ್ತು 3 ಇವುಗಳನ್ನು ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ.

ದಾವಾ ಐಟಂ ನಂಬರ್ 1 ರ ಬಗ್ಗೆ ನಮ್ಮ ಅಜ್ಜಿ ನಮ್ಮ ತಂದೆಗೆ ಪತ್ರ ಬರೆದುಕೊಟ್ಟಿದ್ದಾರೆ. ಐಟಂ ನಂಬರ್ 1 ರ ಸ್ವತ್ತನ್ನು ನಮ್ಮ ಅಜ್ಜಿ ದಾನಪತ್ರ ಬರೆದುಕೊಟ್ಟಿದ್ದರು. ಆ ದಾನಪತ್ರವನ್ನು ನಾನು ನೋಡಿಲ್ಲ. ಆ ದಾನಪತ್ರದ ಪ್ರತಿಯನ್ನು ನಾನು ಕೋರ್ಟ್ ಗೆ ಕೊಟ್ಟಿಲ್ಲ. ಪ್ರತಿವಾದಿಗಳ ಹೆಸರಿನಲ್ಲಿ ಯಾವುದೆ ಕಂದಾಯ ದಾಖಲೆಗಳು ಇರುವುದಿಲ್ಲ. ಆದರೆ ಪ್ರತಿವಾದಿಗಳು ನಮಗೆ ಆಸ್ತಿ ಬರಬೇಕೆಂದು ತಂಟೆ ಮಾಡಿದ್ದರಿಂದ ಕೇಸ್ ಮಾಡಿದ್ದೇವೆ. ವಾದಿಗಳಾದ ನಾವು ನಮ್ಮ ಮಧ್ಯೆ ಭಾಗ ಮಾಡಿಕೊಂಡಿಲ್ಲ. 3 ನೆ ವಾದಿಯು ನನ್ನ ತಮ್ಮನಾಗಬೇಕು. 3 ನೆ ವಾದಿಯು ನನ್ನ , ಇತರೇ ವಾದಿ ಮತ್ತು ಪ್ರತಿವಾದಿಗಳನ್ನು ಸೇರಿಸಿ ಎರಡನೇ ಹೆಚ್ಚುವರಿ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಓ ಎಸ್ 469/2014 ಎಂಬ ದಾವೆ ಮಾಡಿದ್ದರು ಎಂದರೆ ಸರಿ. ಆ ಪ್ರಕರಣದಲ್ಲಿ ನಮ್ಮ ತಮ್ಮನ ಕಡೆಯಿಂದ ಹಾಗೂ ಪ್ರತಿವಾದಿಗಳ ಕಡೆಯಿಂದ ಸಾಕ್ಷಿ ವಿಚಾರಣೆ ಆಗಿತ್ತು ಎಂದರೆ ಸರಿ. ಆ ದಾವೆಯಲ್ಲಿಯೂ ಸಹ ಈ ದಾವಾಸ್ವತ್ತುಗಳಿದ್ದವು ಎಂದರೆ ಸರಿ.

ನಮ್ಮ ತಂದೆಗೆ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಅವರೆಂದರೆ ನಗೀನಾ ಮತ್ತು ಆಸೀನಾ ಇರುತ್ತಾರೆ. ಅವರು ಈಗ ಅವರ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ. ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ. ನಮ್ಮ ಅಜ್ಜಿಯ ಹೆಸರು ಖಾಸಿಂಬಿ ಅವರ ತಾಯಿಯ ಹೆಸರು ಫೀರಂಬಿ ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ನಮ್ಮ

ತಾಯಿ ಪಾಚುಬಿ ಮತ್ತು ಅಶುಬಿ ಎಂಬ ಮಕ್ಕಳಿರುತ್ತಾರೆ. ಫಿರಂಬಿ ಇವರ ಸ್ವತ್ತುಗಳನ್ನು ಅವರ 3 ಜನ ಮಕ್ಕಳು ಹಂಚಿಕೊಂಡಿದ್ದರು ಎಂದರೆ ಸರಿ. ಪಾಚಾಬಿ ಇವರ ಸ್ವತ್ತುಗಳನ್ನು ನಮ್ಮ ತಂದೆ ಕ್ರಯಕ್ಕೆ ತೆಗೆದುಕೊಂಡಿದ್ದಾರೆ. ಸ.ನಂ. 170/2 ರಲ್ಲಿ 1 ಭಾಗವನ್ನು ನಮ್ಮ ತಂದೆ ಕೊಂಡುಕೊಂಡಿದ್ದರು. ನಮ್ಮ ಅಜ್ಜಿ ಖಾಸಿಂಬಿ ಇವರಿಗೆ ಒಟ್ಟು 8 ಜನ ಮಕ್ಕಳೆಂದರೆ ಸರಿ. ಅವರುಗಳೆಂದರೆ ಇಬ್ರಾಹಿಂ ಖಾನ್, ಖುದ್ದುಸ್ ಖಾನ್ , ಅಮ್ರೀನ್ ಖಾನ್, ಮುಸ್ತಾಫ ಖಾನ್, ಅಹಮ್ಮದ್ ಖಾನ್, ಹಸ್ಮತ್ ಖಾನ್, ಫಿರಂಬಿ ಮತ್ತು ಸಕೀನಾ ಬಿ ಇರುತ್ತಾರೆ ಎಂದರೆ ಸರಿ. ಖಾಸಿಂಬಿ ಇವರ ಗಂಡು ಮಕ್ಕಳು ಎಲ್ಲ ಆಸ್ತಿಗಳನ್ನು ಹಂಚಿಕೊಂಡಿದ್ದರು ಎಂದರೆ ಸರಿಯಲ್ಲ. ಅವರ ಮದ್ಯೆ ಯಾವುದೆ ಭಾಗವಾಗಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಭಾಗವಾದ ಪ್ರಕಾರ ನಮ್ಮ ತಂದೆ ಹಾಗೂ ಅವರ ಸಹೋದರರ ಹೆಸರಿನಲ್ಲಿ ಎಂ ಆರ್ 1/998-99 ರ ಪ್ರಕಾರ ಖಾತೆಯಾಗಿದೆ ಎಂದರೆ ಸರಿಯಲ್ಲ.

ದಾನಪತ್ರದ ಪ್ರತಿಯನ್ನು ಕಂದಾಯ ಅಧಿಕಾರಗಳಿಗೆ ಕೊಟ್ಟಿದ್ದೇವೆ. ಈಗ ನಮ್ಮ ಬಳಿ ಅದರ ಪ್ರತಿ ಇಲ್ಲ. ಭಾಗವಾಗುವಷ್ಟರಲ್ಲಿ ನಮ್ಮ ತಂದೆ ತೀರಿಕೊಂಡಿದ್ದರು ಎಂದರೆ ಸಾಕ್ಷಿ ಭಾಗ ಆಗಿರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ವಿಭಾಗಪತ್ರದ ಫೋಟೋಕಾಪಿಯನ್ನು ತೋರಿಸಿದಾಗ ಸಾಕ್ಷಿ ಅದರಲ್ಲಿ ನಾವು ಯಾರು ಸಹಿ ಮಾಡಿಲ್ಲ ಎಂದು ಹೇಳುತ್ತಾರೆ. ವಾದಪತ್ರದಲ್ಲಿ ಇರುವ 3 ನೆ ಸಹಿಯನ್ನು ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಪುನಃ ಹೇಳುತ್ತಾರೆ ನಾನು ಮತ್ತು ನಮ್ಮ ಅಣ್ಣ ತಮ್ಮಂದಿರು ಸಹಿ ಮಾಡಿದ್ದೇವೆ. ನನ್ನ ತಮ್ಮ ಓ ಎಸ್ 469/2014 ರಲ್ಲಿ ಹೇಳಿದ ಸಾಕ್ಷಿ ಸತ್ಯವಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾವು ಅಣ್ಣ ತಮ್ಮಂದಿರು ಚೆನ್ನಾಗಿರುತ್ತೇವೆ ನಮ್ಮ ಮದ್ಯೆ ಯಾವುದೆ ಜಗಳ ಆಗಿಲ್ಲ. ನಾವು ಬೇರೆ ಬೇರೆ ಕಡೆ ವಾಸವಾಗಿರುತ್ತೇವೆ. ನಿಸಾರ್ ಅಹಮ್ಮದ್ ಊರಿನಲ್ಲಿ ವಾಸವಾಗಿರುತ್ತಾರೆ. ನಾವು ಉಳಿದವರು ಬೆಂಗಳೂರಿನಲ್ಲಿ ವಾಸವಾಗಿದ್ದೇವೆ.

ನಮ್ಮ ತಂದೆ ತೀರಿಕೊಂಡ ನಂತರ ನಾವು ವಾದಿಗಳು ದಿನಾಂಕ :10.03.1993 ರಂದು ಎಲ್ಲ ಆಸ್ತಿಗಳನ್ನು ಹಂಚಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರಲ್ಲಿ 1 ಎಕರೆ 3 ಗುಂಟೆ ನಮಗೆ ಬಂದಿದ ಎಂದರೆ ಸರಿಯಲ್ಲ. ಸ.ನಂ.169/3 ರಲ್ಲಿ 6 ಗುಂಟೆ ನಮ್ಮ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಸ.ನಂ. 170/2 ರಲ್ಲಿ 30 ಗುಂಟೆ ಮತ್ತು ಸ.ನಂ. 169/3 ರಲ್ಲಿ 11 ಗುಂಟೆ 1 ನೆ ಪ್ರತಿವಾದಿಯ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಅದರ ಚೆಕ್ ಬಂದಿ ಪೂರ್ವಕ್ಕೆ ದಸ್ತಗಿರಿಖಾನ್ ಇವರ ಜಮೀನು, ಪಶ್ಚಿಮಕ್ಕೆ ನಮ್ಮ ಭಾಗದ ಜಮೀನು, ಉತ್ತರಕ್ಕೆ ಸರ್ಕಾರಿ ಜಮೀನು ಮತ್ತು ರಹಿಂಸಾಬ್ ಇವರ ಜಮೀನು ಮತ್ತು ದಕ್ಷಿಣಕ್ಕೆ ನಮ್ಮದೇ ಭಾಗದ

ಜಮೀನು ಎಂದರೆ ಸರಿಯಲ್ಲ. ಮೇಲೆ ಹೇಳಿದ ಚೆಕ್ ಬಂದಿಯ ಮಧ್ಯದ ಜಮೀನಿನಲ್ಲಿ 1ನೆ ಪ್ರತಿವಾದಿ ಸ್ವಾಧೀನ ಹೊಂದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈಗ ಸ.ನಂ. 170/2 ರ ಆರ್ ಟಿ ಸಿ ಜುಬೇದಾಬಿ ಇವರ ಹೆಸರಿನಲ್ಲಿದೆ ಎಂದರೆ ಸರಿ. ಆ ಕಾರಣಕ್ಕೆ ನಾವು ಕೋರ್ಟ್ ಗೆ ಬಂದಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ಸ.ನಂ. 169/3 ರ 11 ಗುಂಟೆ ಚೆಕ್ ಬಂದಿ ಪೂರ್ವಕ್ಕೆ 1ನೆ ಪ್ರತಿವಾದಿಯ ಭಾಗದ ಜಮೀನು, ಪಶ್ಚಿಮಕ್ಕೆ ಎ ಶೆಡ್ಯೂಲ್ ದಾರರ ಜಮೀನು , ಉತ್ತರಕ್ಕೆ ರಹಿಂಸಾಬ್ ಇವರ ಜಮೀನು ಮತ್ತು ದಕ್ಷಿಣಕ್ಕೆ ಎ ಮತ್ತು ಬಿ ಶೆಡ್ಯೂಲ್ ದಾರರ ಹಿಸ್ಸೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಆ ಸ್ವತ್ತಿನ ಪಹಣಿಗಳು ಈಗ 1ನೆ ಪ್ರತಿವಾದಿಯ ಹೆಸರಿನಲ್ಲಿವೆ ಎಂದರೆ ಸರಿ. ಅದಕ್ಕಾಗಿ ಕೇಸ್ ಮಾಡಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ.

ಪ್ರತಿವಾದಿಗಳು ಮೊದಲು ಊರಿನಲ್ಲಿ ಇರಲಿಲ್ಲ. ಈಗ ಸುಮಾರು 10 ವರ್ಷಗಳಿಂದ ಅವರು ಊರಿನಲ್ಲಿ ವಾಸವಾಗಿದ್ದಾರೆ. ಜುಬೇದಾಬಿ ಇವರ ಮಕ್ಕಳನ್ನು ನಾವು ಪಾರ್ಟಿ ಮಾಡಿಲ್ಲ ಎಂದರೆ ಸರಿ. ಈ ಹಿಂದೆ ಆದ ವಿಭಾಗಪತ್ರದಲ್ಲಿ ಎ ದಿಂದ ಎಫ್ ಶೆಡ್ಯೂಲ್ ಗಳನ್ನಾಗಿ ಮಾಡಿ ಆಸ್ತಿಗಳನ್ನು ಹಂಚಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕಾರ ಆಸ್ತಿಗಳನ್ನು ಅವರವರು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು 1ನೆ ಪ್ರತಿವಾದಿ ಮಾತ್ರ ಆಸ್ತಿ ಉಳಿಸಿಕೊಂಡಿದ್ದೇವೆ, ಉಳಿದವರು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು 4 ಜನ ಅವರವರ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ನಮಗೆ ಗೊತ್ತಿಲ್ಲದಂತೆ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿಗಳು ಮಾರಾಟ ಮಾಡಿದ ಕ್ರಯದಾರರನ್ನು ನಾವು ಈ ಕೇಸ್ ನಲ್ಲಿ ಪಾರ್ಟಿ ಮಾಡಿಲ್ಲ. ಆ ಕ್ರಯಪತ್ರಗಳನ್ನು ರದ್ದು ಮಾಡಬೇಕೆಂದು ಪರಿಹಾರ ಕೇಳಿದ್ದೇನೆ.

ನಾನು ಮತ್ತು ನಮ್ಮ ಚಿಕ್ಕಪ್ಪಂದಿರು ಚೆನ್ನಾಗಿರುತ್ತೇವೆ. ಇಬ್ರಾಹಿಂ ಖಾನ್ ಮತ್ತು ಅವರ ಹೆಂಡತಿ ಮಕ್ಕಳು ನನ್ನ ಜೊತೆ ಚೆನ್ನಾಗಿರುತ್ತಾರೆ. ಅವರು ಈ ಕೇಸ್ ನ ಪ್ರತಿವಾದಿ 2 ರಿಂದ 5 ರವರು ಎಂದರೆ ಸರಿ. ನನಗೂ ಮತ್ತು 1ನೆ ಪ್ರತಿವಾದಿಗೂ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ಉಳಿದ ವಾದಿಗಳನ್ನು ಸಹ ನಾನು ಈ ಕೇಸಿ ನಲ್ಲಿ ಸಾಕ್ಷಿ ಮಾಡಿಸುತ್ತೇನೆ. ಎ ಸಿ ನ್ಯಾಯಾಲಯ ರಾಮನಗರದಲ್ಲಿ ನಮ್ಮ ಅಣ್ಣ ಕೇಸ್ ಹಾಕಿದ್ದರು, ಅದು ವಜಾ ಆಗಿದೆ ಎಂದು ಸಾಕ್ಷಿ ಹೇಳುತ್ತಾರೆ. ಅದರ ನಂಬರ್ ಆರ್ ಎ ಎಲ್ ಕೆ ಪಿ 105/2000-01 ಇರುತ್ತದೆ ಎಂದರೆ ಸರಿ. ಪ್ರತಿವಾದಿಗಳು ಖಾತೆ ಪಹಣಿ ಮಾಡಿಸಿಕೊಂಡಿದ್ದು 2000 ಕ್ಕಿಂತ ಮೊದಲೇ ನಮಗೆ ಗೊತ್ತಿತ್ತು ಎಂದರೆ ಸರಿ. ಅಪೀಲು ವಜಾವಾದ ನಂತರ ಆ ತೀರ್ಪಿನ ವಿರುದ್ದ ಯಾವುದೆ ಮೇಲ್ಮನವಿ

ಸಲ್ಲಿಸಿಲ್ಲ. ನಮ್ಮ ಅಣ್ಣ ತಮ್ಮಂದಿರು ಸೇರಿ ಆರ್ ಎ ಎಲ್ ಕೆ ಪಿ 258/2007-08 ಎಂಬ ಅಪೀಲು ಮಾಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ಆ ಎರಡು ಕೇಸ್ ಗಳು ವಜಾವಾದ ನಂತರ ನನ್ನ ತಮ್ಮ ಓ ಎಸ್ 469/2014 ಎನ್ನುವ ದಾವೆ ಮಾಡಿದ್ದನು ಎಂದರೆ ಸರಿ. ಆ ಪ್ರಕರಣ ನಮ್ಮ ವಿರುದ್ದ ಆಗುತ್ತದೆ ಎಂದು ಕೇಸ್ ವಾಪಸ್ ಪಡೆದಿದ್ದೇವೆ ಎಂದರೆ ಸರಿ. ಆ ಕೇಸ್ ನಲ್ಲಿ ನನ್ನ ತಮ್ಮ ಈಗಾಗಲೇ ಭಾಗವಾಗಿದೆ ಎಂದು ಒಪ್ಪಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಈ ಕೇಸ್ ನ 4 ನೆ ಪ್ರತಿವಾದಿಯು ಮೇಲೆ ಹೇಳಿದ ಕೇಸ್ ನಲ್ಲಿ ನಮ್ಮ ಪರವಾಗಿ ಸಾಕ್ಷಿ ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲ ವಿಷಯ ಗೊತ್ತಿದ್ದರೂ ಸಹ ಜುಬೇದಾಬಿ ಇವರ ಭಾಗಕ್ಕೆ ಬಂದ ಸ್ವತ್ತನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ನಾವು ಮತ್ತು ಪ್ರತಿವಾದಿ 2 ರಿಂದ 5 ರವರ ಸೇರಿ ಒಂದು ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಎಂ ವಿ ಎಸ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**